# ಹೈದರಾಬಾದ್ ಸಂಸ್ಥಾನದಲ್ಲಿ ಭೂ ಹಿಡುವಳಿ ವ್ಯವಸ್ಥೆ

**ಜಗದೀಶ**

ಸಹಾಯಕ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ರುದ್ರಗೌಡ ಪಾಟೀಲ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಹಾಗೂ ಸ್ನಾತಕೋತ್ತರ ಕೇಂದ್ರ, ಬೀಳಗಿ.

**DOI: https://doi.org/10.5281/zenodo.18008790**

## ABSTRACT:

ಹೈದರಾಬಾದ್ ಸಂಸ್ಥಾನದ ಭೂ ಹಿಡುವಳಿ ವ್ಯವಸ್ಥೆ ದಕ್ಷಿಣ ಭಾರತದ ಇತಿಹಾಸದಲ್ಲಿ ಮಹತ್ವಪೂರ್ಣ ಘಟ್ಟವಾಗಿದೆ. ಅಸಫ್ ಜಾಹಿ ಆಡಳಿತದಲ್ಲಿ ಜಾರಿಯಲ್ಲಿದ್ದ ವಿವಿಧ ಭೂ ಹಿಡುವಳಿಯ ಪ್ರಕಾರಗಳು, ಅವುಗಳ ರಾಜಕೀಯ ಬದಲಾವಣೆಗಳು, ಆಡಳಿತಾತ್ಮಕ ಸುಧಾರಣೆಗಳು ಮತ್ತು ಅವುಗಳ ಮೇಲಿನ ಬ್ರಿಟಿಷ್ ಆಡಳಿತ ವ್ಯವಸ್ಥೆಯ ಪ್ರಭಾವ ಬೀರುವಂತೆ ಆಳಿದಂತಹ ನಿಜಾಮರು ತಮ್ಮ ಆಳ್ವಿಕೆಯ ಕಾಲಾವಧಿಯಲ್ಲಿ ಜಾರಿಗೆ ತಂದಂತಹ ಆಡಳಿತ ಪದ್ಧತಿಗಳು ಹಾಗೂ ಒಂದನೇ ನಿಜಾಮನಿಂದ ಹಿಡಿದು ಏಳನೇ ನಿಜಾಮನ ಕಾಲದ ಆಡಳಿತಾತ್ಮಕ ಕೊಡುಗೆಗಳು, ಆಡಳಿತ ವ್ಯವಸ್ಥೆಯಲ್ಲಿ ಕೈಗೊಂಡ ಕ್ರಮಗಳ ಬಗ್ಗೆ ಪ್ರಸ್ತುತ ಅಧ್ಯಯನ ಕೈಗೊಳ್ಳಲಾಗಿದೆ. ಇವರು ತಮ್ಮ ಆಡಳಿತ ಪದ್ಧತಿಯಲ್ಲಿ ಮೊಘಲರ ಮತ್ತು ಬ್ರಿಟಿಷರ ಆಡಳಿತದ ಅಂಶಗಳನ್ನು ಕೆಲವೊಂದು ಮಾರ್ಪಾಡುಗಳೊಂದಿಗೆ ತಮ್ಮದೇ ಆದ ರೀತಿಯಲ್ಲಿ ಹೊಸ ನಿಯಮಗಳನ್ನು ರೂಪಿಸಿಕೊಂಡು ಆಡಳಿತ ನಡೆಸಿರುವುದನ್ನು ನೋಡಬಹುದು.

## KEYWORDS:

ದಿವಾನಿ ಅಥವಾ ಖಾಲ್ಸಾ ಭೂಮಿ, ಜಹಗೀರು ಭೂಮಿ, ದಿವಾನ್-ಇ-ಖಾಸ್ ಭೂಮಿ, ಇನಾಮ್ ಭೂಮಿ, ಸುಭೇದಾರರು, ತಾಲೂಕುದಾರರು, ಜಾಗೀರ್‌ದಾರರು.

### ಪ್ರಸ್ತಾವನೆ:

ನಿಜಾಮರ ಕಂದಾಯ ಆಡಳಿತವು ಹೆಚ್ಚಾಗಿ ಮೊಘಲರ ಕಂದಾಯದ ತಳಪಾಯದ ಅಡಿಯಲ್ಲಿ ಜಾರಿಗೆ ಬಂದಿತು. ನಿಜಾಮರು ಕಂದಾಯ ಆಡಳಿತದ ಉತ್ತಮ ತತ್ವಗಳನ್ನು ಅಭಿವೃದ್ಧಿಪಡಿಸಿದರು. ನಿಜಾಮ್-ಉಲ್-ಮುಲ್ಕ್ ಅವಧಿಯಲ್ಲಿ ಅಸಫ್ ಜಾಹಿ ಪ್ರದೇಶದ ಮೂಲವು ಭೂಕಂದಾಯವಾಗಿತ್ತು. ಕಂದಾಯ ಆಡಳಿತವು ತನ್ನದೇ ಆದ ವಿಶಿಷ್ಟ ಇತಿಹಾಸವನ್ನು ಹೊಂದಿದೆ. ಕಂದಾಯ ಸರಕಾರದ ಅಡಿಪಾಯವಾಗಿದೆ. ಭೂ ಕಂದಾಯ ಪ್ರಮುಖ ಆದಾಯದ ಮೂಲವಾಗಿತ್ತು. ಸರಕಾರ ಭೂ ಕಂದಾಯದ ಬೆಂಬಲದಿಂದಲೇ ನಡೆಯುತ್ತಿತ್ತು. ಇದು ಸರ್ಕಾರಕ್ಕೆ ಪ್ರಮುಖ ಆದಾಯ ಮೂಲವಾಗಿ ಕಂಡುಬಂದಿರುವುದನ್ನು ನೋಡಬಹುದು. ಭಾರತವನ್ನು ಆಳಿದ ಬ್ರಿಟಿಷರು ಸಹ ಭೂಕಂದಾಯದ ಮೇಲೆ ಅವಲಂಬಿತರಾಗಿದ್ದರು. ಅವರು ಭಾರತದಲ್ಲಿ ರೈತರಿಂದ ಹೆಚ್ಚಿನ ಆದಾಯವನ್ನು ಸಂಗ್ರಹಿಸಲು, ಹಲವಾರು ಸುಧಾರಣೆಗಳನ್ನು ಪರಿಚಯಿಸಿದರು.

ನಿಜಾಮರು ದಖ್ಖನದಲ್ಲಿ ಪರಿಣಾಮಕಾರಿ ಆಡಳಿತಕ್ಕಾಗಿ ಹಲವು ಕ್ರಮಗಳನ್ನು ಕೈಗೊಂಡಿರುವುದನ್ನು ನೋಡಬಹುದು. ಮೊದಲನೇ ನಿಜಾಮ್ ಮೀರ್ ಕಮರುದ್ದೀನ್ ಅಸಫ್ ಜಹಾ ಮೊಘಲರ ಆಡಳಿತ ವ್ಯವಸ್ಥೆಯನ್ನು ಮುಂದುವರೆಸಿದ್ದರು. ಅದು ಹೆಚ್ಚು ಸಂಕೀರ್ಣವಾಗಿ ರಾಜ್ಯದ ವೆಚ್ಚ ಆದಾಯವನ್ನು ಮೀರಿತು. ಇದರ ಪರಿಣಾಮವಾಗಿ ರಾಜ್ಯವು ಅವ್ಯವಸ್ಥೆ ಹಾಗೂ ಗೊಂದಲಕ್ಕೊಳಗಾಯಿತು. ರೈತವರ್ಗ ಸಂಕಷ್ಟಕ್ಕೆ ಸಿಲುಕಿತು. ರಾಜ್ಯವು

ಸಾಲದ ಸುಳಿಯಲಿತ್ತು. ನಗರದಲ್ಲಿ ಸಣ್ಣಪುಟ್ಟ ದಂಗೆಗಳು ಭುಗಿಲೆದ್ದವು. ರಾಜ್ಯದ ಆರ್ಥಿಕ ಚಿತ್ರಣ ಸಂಪೂರ್ಣವಾಗಿ ಬದಲಾಗಿತ್ತು. ಒಂದನೇ ಸಾಲಾರ್ ಜಂಗ್ ಪ್ರಧಾನಿಯಾಗುವವರೆಗೂ ಹೈದರಾಬಾದ್ ಸ್ಥಿತಿ ಹೀಗೆ ಮುಂದುವರೆದು ಇವರು ಪ್ರಧಾನಿಯಾಗಿ ಎಲ್ಲಾ ರೀತಿಯ ಚಾಕಚಕ್ಯತೆಯನ್ನು ಪ್ರದರ್ಶಿಸುವ ಮೂಲಕ ಆರ್ಥಿಕ ಪ್ರಗತಿಗಾಗಿ ಕ್ರಮಗಳನ್ನು ಕೈಗೊಂಡರು.

**ಹೈದರಾಬಾದ್ ಸಂಸ್ಥಾನದಲ್ಲಿ ಭೂ ಹಿಡುವಳಿ ವ್ಯವಸ್ಥೆ:**

ಹೈದರಾಬಾದ್ ನಿಜಾಮರು ತಮ್ಮ ಆಳ್ವಿಕೆಯ ಕಾಲದಲ್ಲಿ ಕೃಷಿ ಭೂಮಿಯನ್ನು ಮೂರು ವಿಭಾಗಗಳಾಗಿ ವಿಭಾಗಿಸಿದ್ದರು. ದಿವಾನಿ ಅಥವಾ ಖಾಲ್ಸಾ, ಜಹಗೀರ್ ಮತ್ತು ಸರ್ಫ್–ಇ–ಖಾಸ್ ಎಂದು ವಿಭಾಗಿಸಿರುವುದನ್ನು ನೋಡಬಹುದು.

**ಭೂಮಿಯ ವರ್ಗೀಕರಣ:**

**ದಿವಾನಿ ಅಥವಾ ಖಾಲ್ಸಾ ಭೂಮಿ:** ಈ ಭೂಮಿ ಸರ್ಕಾರದ ಒಡೆತನದಲ್ಲಿದ್ದು ಆ ಭೂಮಿಯ ಮೇಲೆ ಸರಕಾರವು ಕಂದಾಯ ಸಂಗ್ರಹಿಸುತ್ತಿತ್ತು. ಸಂಸ್ಥಾನದ ಭೂ ಪ್ರದೇಶದಲ್ಲಿ ಸುಮಾರು 60% ಕಂದಾಯ ವಿಧಿಸುತ್ತಿದ್ದ ಭೂಮಿಯಾಗಿತ್ತು.

**ಜಹಗೀರು ಭೂಮಿ:** ಆಡಳಿತ ಅಧಿಕಾರಿಗಳಿಗೆ ಹಾಗೂ ನಿಜಾಮರ ಸಂಬಂಧಿಕರಿಗೆ ನೀಡಿದ್ದ ಭೂಪ್ರದೇಶ ಜಹಗೀರು ಭೂಮಿಯಾಗಿತ್ತು. ಇದು 40% ರಷ್ಟಿತ್ತು.

**ಸರ್ಫ್–ಇ–ಖಾಸ್ ಭೂಮಿ:** ಈ ಭೂಮಿ ನಿಜಾಮನ ಖಾಸಗಿ ಜೀವನಕ್ಕಾಗಿ ನೀಡಿದ ಭೂಮಿಯನ್ನು ಸರ್ಫ್–ಎ–ಖಾಸ್ ಎಂದು ಕರೆಯುತ್ತಿದ್ದರು. ಈ ಭೂಮಿ 10% ರಷ್ಟಿತ್ತು.

**ದಿವಾನಿ ಭೂಮಿ:** ಈ ಭೂಮಿಯನ್ನು ಸಂಪೂರ್ಣವಾಗಿ ರೈತವಾರಿ ಅಧಿಕಾರ ಅವಧಿ ಏಕರೂಪವಾಗಿ ನಡೆಸಲಾಗುತ್ತದೆ. 20 ಎಕರೆಗಳಿಗಿಂತ ಹೆಚ್ಚು ಅಥವಾ ರಾಜ್ಯದ ಪ್ರದೇಶದ ಶೇಕಡ 50ಕ್ಕಿಂತ ಭೂ ಮಾಲೀಕರು ಈ ಅಧಿಕಾರ ಅವಧಿಯಲ್ಲಿ ಹೊಂದಿದ್ದಾರೆ. ಈ ವ್ಯವಸ್ಥೆಯ ಅಡಿಯಲ್ಲಿ ಪ್ರತಿ ಕ್ಷೇತ್ರವನ್ನು ಹಿಡುವಳಿ ಎಂದು ಪರಿಗಣಿಸಲಾಗುತ್ತದೆ.

**ಭೂಕಂದಾಯದ ಭಾಗಗಳು:** ಭೂ ಕಂದಾಯವನ್ನು ಆಡಳಿತದ ಉದ್ದೇಶಕ್ಕಾಗಿ ಅಸಫ್ ಜಾಹಿಗಳು ಭೂಮಿಯನ್ನು ಮೂರು ರೀತಿಯಲ್ಲಿ ವರ್ಗೀಕರಿಸಿದ್ದರು.

**ಖಾಲ್ಸಾ ಭೂಮಿ:** ಭೂ ಆದಾಯದ ಹೆಚ್ಚಿನ ಭಾಗವು ಖಾಲ್ಸಾ ಭೂಮಿಯಿಂದ ಬರುತ್ತಿತ್ತು. ಕೆಲವು ಜಮೀನುಗಳನ್ನು ಸರಕಾರದ ಪರವಾಗಿ ನಿರ್ವಹಿಸುತ್ತಿತ್ತು. ಇದರಿಂದ ಬರುವ ಆದಾಯವು ಸರ್ಕಾರದ ಬೊಕ್ಕಸಕ್ಕೆ ಹೋಗುತ್ತದೆ. ಆದರೂ ಪ್ರಾಂತ್ಯಗಳ ಒಟ್ಟು ಪ್ರದೇಶದ ಶೇಕಡ 50 ಕ್ಕಿಂತ ಹೆಚ್ಚು ಭೂಮಿ ಈ ವರ್ಗಕ್ಕೆ ಸೇರಿದೆ. ಈ ವರ್ಗದ ಅಡಿಯಲ್ಲಿನ ಭೂಮಿಯನ್ನು ದಿವಾನಿ ಅಥವಾ ಖಾಲ್ಸಾ ಭೂಮಿ ಎಂದು ಕರೆಯಲಾಗುತ್ತಿತ್ತು.

**ಜಾಗೀರ್ ಆಡಳಿತ:** ಹೈದರಾಬಾದ್ ಜಾಗೀರಗಳಲ್ಲಿ ಭಾರತದಲ್ಲಿ ಬೇರೆಡೆ ಕಂಡು ಬರದ ಕೆಲವು ವಿಶೇಷತೆಗಳಿವೆ. ಹೀಗಾಗಿ ಉತ್ತರ ಭಾರತದ ಜಮೀನ್ದಾರರು ಕೇವಲ ಭೂ ಕಂದಾಯವನ್ನು ಸಂಗ್ರಹಿಸುವ ಮತ್ತು ಅದರ ಒಂದು ಭಾಗವನ್ನು ರಾಜ್ಯದ ಖಜಾನೆಗೆ ಜಮಾ ಮಾಡುವ ಸರಕಾರದ ಏಜೆಂಟರಂತೆ ವರ್ತಿಸುವುದಕ್ಕಿಂತ ಭಿನ್ನವಾಗಿ ಹೈದರಾಬಾದಿನ ಜಾಗೀರುದಾರರು ಹೆಚ್ಚಿನ ಸಂದರ್ಭದಲ್ಲಿ ಸಂಗ್ರಹಿಸಿದ ಸಂಪೂರ್ಣ ಭೂಕಂದಾಯವನ್ನು ಉಳಿಸಿಕೊಂಡರು. ಎರಡನೇದಾಗಿ ಅವರು ವಿಶಾಲವಾದ ನ್ಯಾಯಾಂಗ, ಪೊಲೀಸ್ ಮತ್ತು ಆಡಳಿತಾತ್ಮಕ ಅಧಿಕಾರಗಳನ್ನು ಅನುಭವಿಸಿದರು. ಕಂದಾಯ ಕ್ಷೇತ್ರದಲ್ಲಿ ಜಾಗೀರುದಾರರು ತಾಲೂಕುದಾರರು ಮತ್ತು ತಹಸಿಲ್ದಾರರಂತಹ ಕಂದಾಯ ಅಧಿಕಾರಿಗಳನ್ನು ನೇಮಿಸಿದರು.

ಅವರು ಪಟ್ವಾರಿಗಳು ಮತ್ತು ಪಟೇಲರಂತಹ ಹಳ್ಳಿಗಳ ಅಧಿಕಾರಿಗಳನ್ನು ನೇಮಿಸುವ ಅಥವಾ ವಜಾ ಮಾಡುವ ಹಕ್ಕನ್ನು ಸಹ ಅನುಭವಿಸಿದರು.

**ಸರ್ಫ್–ಇ–ಖಾಸ್:** ಈ ಭೂಮಿಯು ನಿಜಾಮನ ಒಡೆತನದಲ್ಲಿ ಇತ್ತು. ನಿಜಾಮನ ಖಾಸಗಿ ಭೂಮಿಯನ್ನು ಸರ್ಫ್–ಇ–ಖಾಸ್ ಎಂದು ಕರೆಯಲಾಗುತ್ತಿತ್ತು. ರಾಜಧಾನಿಯನ್ನು ಸುತ್ತುವರೆದಿರುವ ಸರ್ಫ್–ಇ–ಖಾಸ್ ಭೂಮಿಯನ್ನು ವಾಸ್ತವವಾಗಿ ದಿವಾನಿ ಅಧಿಕಾರಿಗಳು ಮಾತ್ರ ನಿರ್ವಹಿಸುತ್ತಿದ್ದರು. ಆಡಳಿತ ಪ್ರದೇಶಗಳಲ್ಲಿ ಬಹುತೇಕ ಸಂಪೂರ್ಣ ಏಕರೂಪತೆ ಇತ್ತು. ಒಂದನೇ ವ್ಯತ್ಯಾಸವೆಂದರೆ ಸರ್ಫ್–ಇ–ಖಾಸ್ ಜಮೀನುಗಳಿಂದ ಸಂಗ್ರಹಿಸಲಾದ ಆದಾಯವು ಖಾಸಗಿ ಉದ್ದೇಶಕ್ಕೆ ಸಲ್ಲುತ್ತದೆ.

**ಸರ್ಫ್–ಇ–ಖಾಸ್ ನಿಜಾಮನ ಭೂ ಆಸ್ತಿಗಳು:** 19ನೇ ಶತಮಾನದ ಮಧ್ಯ ಭಾಗದ ನಂತರ ಹೈದರಾಬಾದ್ ರಾಜ್ಯವು 82,698 ಚದುರ ಮೈಲುಗಳಷ್ಟು ವಿಸ್ತೀರ್ಣದೊಂದಿಗೆ ಭಾರತದ ಅತಿ ದೊಡ್ಡ ರಾಜ್ಯ ಪ್ರಭುತ್ವ ರಾಜ್ಯವಾಗಿತ್ತು. ರಾಜ್ಯದಲ್ಲಿ ಅಸಫ್ ಜಾಹಿ ಆಳ್ವಿಕೆಯಲ್ಲಿ ಮೂರು ರೀತಿಯ ಗ್ರಾಮಗಳಿದ್ದವು. ಒಟ್ಟು ಸರ್ಫ್‌ಗಳ ಸಂಖ್ಯೆ 22,457. ಸರ್ಫ್–ಇ–ಖಾಸ್ ಅವುಗಳ ಜಮೀನುಗಳು ನಿಜಾಮರ ಕುಟುಂಬದ ಖಾಸಗಿ ಆಸ್ತಿಗಳಾಗಿದೆ. ಇವುಗಳ ಸಂಪೂರ್ಣ ಆದಾಯವು ರಾಜಮನೆತನಕ್ಕೆ ಹೋಗುತ್ತದೆ. ಶೇಕಡ 10ರಷ್ಟು ರಾಜ್ಯದ ಭೂಮಿ ಸರ್ಫ್–ಇ–ಖಾಸ್‌ಗೆ ಸೇರಿತ್ತು.[1] ಈ ಗ್ರಾಮಗಳಲ್ಲಿ 55 ಲಕ್ಷ ಎಕರೆ ಕೃಷಿಯೋಗ್ಯ ಭೂಮಿ ಇತ್ತು. ಈ ವೈಯಕ್ತಿಕ ಆಸ್ತಿಯು ವರ್ಷಕ್ಕೆ 25 ಮಿಲಿಯನ್ ರೂಪಾಯಿಗಳನ್ನು ನೀಡುತ್ತದೆ.

ನಿಜಾಮನಿಗೆ ರಾಜ್ಯದ ಖಜಾನೆಯಿಂದ ವರ್ಷಕ್ಕೆ 70,00,000 ರೂ. ನೀಡಲಾಗುತ್ತಿತ್ತು. ನಿಜಾಮನು ಭಾರತ ಸರ್ಕಾರದ ಪಡೆಗಳಿಗೆ ಶರಣಾದಾಗ ಪೊಲೀಸ್ ಕಾರ್ಯಾಚರಣೆಯ ನಂತರ ನಿಜಾಮ್ ಅವರಿಗೆ ಭಾರತ ಸರಕಾರವು 50 ಲಕ್ಷ ರೂಪಾಯಿಗಳನ್ನು ನೀಡಿತು. ಈ ಎಲ್ಲಾ ಹಣವು ಆದಾಯ ತೆರಿಗೆಗೆ ಒಳಪಟ್ಟಿಲ್ಲ. ರಾಜ್ಯದಲ್ಲಿ ಸರ್ಫ್–ಇ–ಖಾಸ್ ಅಡಿಯಲ್ಲಿದ್ದ ಗ್ರಾಮಗಳು ಅತ್ಯಂತ ಹಿಂದುಳಿದಿವೆ ಎಂದು ರಾಜ್ಯದ ಆಡಳಿತವು ಕಂಡುಹಿಡಿದಿದೆ. ಈ ರೀತಿಯಾಗಿ ನಿಜಾಮರು ಅಪಾರ ತೆರಿಗೆಗಳನ್ನು ಪಡೆಯುತ್ತಿದ್ದರು.

ಪೈಗಾ ಸಂಸ್ಥಾನ ಜಾಗೀರ್ ಮತ್ತು ದೇಶಮುಖ ಇವರಿಗೆ ಸೇರಿದ ಹಳ್ಳಿಗಳಲ್ಲಿನ ಜಮೀನುಗಳು ಪೈಗಾಗಳು ರಾಜಮನೆತನದ ಸಂಬಂಧಿಕರಾಗಿದ್ದು ಅವರು ಮೊದಲಿನಿಂದಲೂ ರಾಜ ಕುಟುಂಬದೊಂದಿಗೆ ಇದ್ದರು. ಅವರಿಗೆ ಸೈನ್ಯವನ್ನು ಒದಗಿಸುತ್ತಿದ್ದರು. ನಿಜಾಮರು 18ನೇ ಶತಮಾನದ ಉತ್ತರಾರ್ಧದಲ್ಲಿ ಮರಾಠರೊಂದಿಗೆ ನಡೆಸಿದ ಕೊನೆಯ ಯುದ್ಧದ ನಂತರ ಅವರು ಬ್ರಿಟಿಷ್ ಪಡೆಗಳ ರಕ್ಷಣೆ ಪಡೆದರು. ಆದರೆ ಪೈಗಾಗಳು ಹಿಂದೆ ಕೊಟ್ಟ ಜಮೀನುಗಳನ್ನು ಅನುಭವಿಸುತ್ತಲೇ ಇದ್ದರು. ಜಾಗೀರದಾರರು ಮತ್ತು ಇತರ ಊಳಿಗಮಾನ್ಯರು ನಿಜಾಮನಿಗೆ ವಾರ್ಷಿಕ ಹಣವನ್ನು ಪಾವತಿಸುತ್ತಿದ್ದರು. ಇವುಗಳು ತಮ್ಮ ಪೊಲೀಸ್ ಕಾನೂನು ಮತ್ತು ಕಂದಾಯ ವ್ಯವಸ್ಥೆಯನ್ನು ಹೊಂದಿದ್ದವು. 30ರಷ್ಟು ರಾಜ್ಯದ ಜಮೀನುಗಳು ಮತ್ತು 6,535 ಹಳ್ಳಿಗಳು ಈ ಗುಂಪಿನ ಭಾಗವಾಗಿದ್ದವು.

**ಪೈಗಾ ಭೂಮಿ:** ಮಿಲಿಟರಿ ಅಧಿಕಾರಿಗಳ ನಿಯೋಜನೆಗಾಗಿ ಲಭ್ಯವಿರುವ ಅಥವಾ ಕಾಯ್ದಿರಿಸಲಾದ ಭೂಮಿ ಪೈಗಾ ಭೂಮಿಯಾಗಿತ್ತು. ಇದನ್ನು 'ಜಾಗೀರತ್–ಇ–ನಿಗೇಹ ದಸ್ತ' ಎಂದು ಕರೆಯಲಾಗುತ್ತಿತ್ತು. ಪೈಗಾ ಪದದ ಅರ್ಥ ಸ್ಥಿರ[2]. ಒಂದು ರೀತಿಯ ಮಿಲಿಟರಿ ಜಹಗೀರು. ಈ ಭೂಮಿಯ ಜಹಗೀರು ಮೂಲ ಅನುದಾನ ಪಡೆದ ಕುಟುಂಬದ ಮೂರು ಶಾಖೆಗಳ ನಡುವೆ ವಿಭಜನೆಯಾಯಿತು.

**ಒಂದನೇ ಶಾಖೆ:** ನವಾಬ್ ಸರ್ ಅಸ್ಮಾನ್ ಜಾ ಬಹದ್ದೂರ್ ಅವರಿಗೆ ಸೇರಿದ್ದು. ನಿಜಾಮರ ಪ್ರಧಾನಮಂತ್ರಿ ಮತ್ತು ಅವರ ಚಿಕ್ಕಪ್ಪ ರಾಜಪ್ರತಿನಿಧಿ ನವಾಬ್ ಉಮ್ಮತ್ ಉಲ್ ಮುಲ್ಕ್ ಶಮ್ಸ್ ಉಲ್ ಉಮ್ರಾ ಅಮೀರ್ ಕಬೀರ್ ಫಕ್ರುದ್ದೀನ್ ಅವರಿಂದ ಅನುವಂಶಿಕವಾಗಿ ಪಡೆದರು.

**ಎರಡನೇ ಶಾಖೆ:** ನವಾಬ್ ಶಮ್ಸ್ ಉಲ್ ಉಮ್ರಾ ಅಮೀರ್ ಶಬೀರ್ ಕುರ್ಷಿದ್ ಜಾ ಬಹದ್ದೂರ್ ಅವರ ವಶದಲ್ಲಿತ್ತು.

**ಮೂರನೇ ಶಾಖೆ:** ನವಾಬ್ ಎಕ್ಬಲ್ ಉದ್ದೌಲಾ ಬಹಾದ್ದೂರ್ ವಿಕರ್ ಉಲ್ ಶಾಖೆಯು ಅವರ ವಶದಲ್ಲಿತ್ತು. ಪೈಗಾ ಗ್ರಾಮಗಳು ಶ್ರೀಮಂತ ಭೂಮಿಯನ್ನು ಹೊಂದಿದ್ದು ಮೂಲತಃ ಅವರು ವಾರ್ಷಿಕ ಆದಾಯ ರೂಪಾಯಿ ನೀಡಲಾದ ಕೆಲವು ತಾಲೂಕುಗಳನ್ನು ಮೂಲತಃ ಹಿಂತೆಗೆದುಕೊಳ್ಳಲಾಯಿತು. ಹೀಗಾಗಿ ಪೈಗಾದ ಆದಾಯವು ರೂಪಾಯಿ 11,24,127. ಆದಾಗ್ಯೂ ಕೆಲವು ತಾಲೂಕುಗಳನ್ನು ಎರಡನೆಯ ನಿಜಾಮರು ಶಮ್ಸ್ ಉಲ್ ಮುಲ್ಕ್ ಫಕ್ರುದ್ದೀನ್ ಖಾನ್‌ಗೆ ಮರುಸ್ಥಾಪಿಸಿದರು. ಕೊನೆಯ ದಶಕದಲ್ಲಿ ಪೈಗಾದಿಂದ ವಾರ್ಷಿಕ ಆದಾಯ 30 ಲಕ್ಷ ರೂಪಾಯಿ. ಇದರ ಜೊತೆಗೆ ಪೈಗಾದಾರರು ವೈಯಕ್ತಿಕ ಜಾಗೀರುಗಳನ್ನು ಹೊಂದಿದ್ದು ಇವುಗಳಿಂದ ವಾರ್ಷಿಕ 80 ಲಕ್ಷ ರೂಪಾಯಿ ವರಮಾನವಿತ್ತು. ಈ ಪೈಗಾಗಳನ್ನು ಹೊಂದಿರುವವರು ಆರೋಗ್ಯ, ಶಿಕ್ಷಣ, ಸಾರ್ವಜನಿಕ ಸಂಸ್ಥೆಗಳು ಮತ್ತು ಸಮೀಕ್ಷೆ ಮತ್ತು ವಸಾಹತು ಇಲಾಖೆಗಳಲ್ಲದೆ ತಮ್ಮ ಸ್ವಂತ ಆದಾಯ ಮತ್ತು ನ್ಯಾಯಾಂಗ ಸಂಸ್ಥೆಗಳನ್ನು ನಿಯಂತ್ರಿಸುವ ಮತ್ತು ಮನೆಯ ಹಿಡಿತವನ್ನು ನಿರ್ವಹಿಸುವುದರ ಹೊರತಾಗಿ ಬಹಳ ವ್ಯಾಪಕವಾದ ಅಧಿಕಾರವನ್ನು ಸ್ಥಾಪಿಸಿದರು.

**ಇನಾಮ್ ಭೂಮಿ**

ಇನಾಮ್ ಎಂಬ ಅರೇಬಿಕ್ ಪದದ ಅರ್ಥ ಪ್ರತಿಫಲ. ನಿಜಾಮರ ಆಳ್ವಿಕೆಯಲ್ಲಿ ಅಸ್ತಿತ್ವದಲ್ಲಿದ್ದ ಊಳಿಗಮಾನ್ಯ ಪದ್ಧತಿಯ ಅಡಿಯಲ್ಲಿ ವಿವಿಧ ಉದ್ದೇಶಗಳಿಗಾಗಿ ಭೂಮಿಯನ್ನು ಉದಾರವಾಗಿ ಇನಾಮ್‌ಗಳಿಗಾಗಿ ದಾನ ಮಾಡಲಾಯಿತು. ಹೀಗೆ ಒಟ್ಟಾರೆಯಾಗಿ 83,000 ಇನಾಮ್ದಾರರ ಪ್ರಾಬಲ್ಯಗಳ ಪೈಕಿ 57,000 ದಿವಾನಿ ಪ್ರದೇಶಗಳಲ್ಲಿದ್ದರೆ, ಉಳಿದ 26,000 ಜಾಗೀರ ಪ್ರದೇಶಗಳಿಗೆ ಒಳಪಟ್ಟಿದ್ದವು. ಈ ರೀತಿಯ ಭೂ ಹಿಡುವಳಿಯನ್ನು ಭೂಮಿಯ ಅನುದಾನ ಎಂದು ವಿವರಿಸಲಾಗಿದೆ. ಇದರಲ್ಲಿ ಕೆಲವು ಕರ್ತವ್ಯಗಳ ನಿರ್ವಹಣೆಗೆ ಪ್ರತಿಯಾಗಿ ಅಥವಾ ದತ್ತಿಯಾಗಿ ಸೇವೆಯಾಗಿ ಯಾವುದೇ ಬಾಧ್ಯತೆ ಇಲ್ಲದೆ ಪ್ರತಿಫಲವಾಗಿ ಒಬ್ಬ ವ್ಯಕ್ತಿ ಅಥವಾ ಸಂಸ್ಥೆಯ ಪರವಾಗಿ ಅದರ ಭಾಗದ ಭೂ ಆದಾಯವನ್ನು ಸಂಗ್ರಹಿಸುವ ಹಕ್ಕನ್ನು ರಾಜ್ಯವು ನೀಡುತ್ತದೆ.

**ಸುಭೇದಾರರು:** ಸುಭೇದಾರರು ಸುಬಾಗಳಲ್ಲಿ ಕಂದಾಯ ಅಧಿಕಾರಿಗಳಾಗಿ ಕಾರ್ಯವನ್ನು ನಿರ್ವಹಿಸುತ್ತಿದ್ದರು. ಸುಬಾ ಪ್ರದೇಶಗಳಲ್ಲಿನ ಎಲ್ಲಾ ತರಹದ ತೆರಿಗೆಗಳನ್ನು ವಸೂಲಿ ಮಾಡಿ ನಿಜಾಮರ ಖಜಾನೆಗೆ ರವಾನಿಸಬೇಕಾಗಿತ್ತು.

**ತಾಲೂಕುದಾರರು:** ಜಿಲ್ಲೆಗಳ ಮುಖ್ಯಸ್ಥರಾಗಿ ತಾಲೂಕುದಾರರು ಕರ್ತವ್ಯವನ್ನು ನಿರ್ವಹಿಸುತ್ತಿದ್ದರು. ಇವರು ಭೂ ಕಂದಾಯವನ್ನು ಸಂಗ್ರಹಿಸುವ ಉದ್ದೇಶಕ್ಕಾಗಿ ಸರ್ಕಾರವು ನೇಮಿಸಿದ ಅಧಿಕಾರಿಗಳು. ತಾಲೂಕುದಾರರು ಅವರ ಆದಾಯದ ಸಂಗ್ರಹದಲ್ಲಿ ಎಂಟನೇ ಒಂದು ಭಾಗದಷ್ಟು ಹೊಂದಿದ್ದರು. ಆದ್ದರಿಂದ ಸರ್ಕಾರದ ದೌರ್ಬಲ್ಯದ ಲಾಭವನ್ನು ಪಡೆದುಕೊಂಡು ಅವರು ರೈತರಿಂದ ಗರಿಷ್ಠ ವಸೂಲಿಯಲ್ಲಿ ತೊಡಗಿದರು. ತಾಲೂಕುದಾರರು

ತಮ್ಮ ತಾಲೂಕುಗಳನ್ನು ಉಪಗುತ್ತಿಗೆದಾರರಿಗೆ ಗುತ್ತಿಗೆ ನೀಡಿದರು ಮತ್ತು ಸಂಗ್ರಹಣೆಯಲ್ಲಿ ಯಾವುದೇ ವೆಚ್ಚವನ್ನು ಮಾಡದೆ ಸರಕಾರವು ಅನುಮತಿಸಿದ ಸಂಪೂರ್ಣ ಸಂಗ್ರಹಣೆಯ ಶುಲ್ಕವನ್ನು ಸ್ವಾಧೀನಪಡಿಸಿಕೊಂಡರು.

ಗ್ರಾಮ ಮಟ್ಟದಲ್ಲಿ ಪಟೇಲ ಮತ್ತು ಪಟವಾರಿಗಳಂತಹ ಅನುವಂಶಿಕ ಕಂದಾಯ ಅಧಿಕಾರಿಗಳು ಕ್ರಮವಾಗಿ ಪರಗಣ ಮತ್ತು ಸರ್ಕಾರ ಮಟ್ಟದಲ್ಲಿ, ದೇಶಮುಖರು, ದೇಶಪಾಂಡೆಯವರು, ಸರ್‌ದೇಶ್‌ಮುಖರು, ಸರ್‌ದೇಶಪಾಂಡೆಯವರು ರಾಜ್ಯಕ್ಕೆ ತಾವು ಸಲ್ಲಿಸಿದ ಸೇವೆಗಳಿಗಾಗಿ ವತನ್ ಎಂದು ಕರೆಯಲ್ಪಡುವ ಕಂದಾಯ ಮುಕ್ತ ಭೂಮಿಯನ್ನು ಹೊಂದಿದ್ದರು. ಈ ವತನ್‌ಗಳನ್ನು ಹೊಂದಿರುವವರನ್ನು ವತನದಾರರೆಂದು ಕರೆಯಲಾಗುತ್ತಿತ್ತು. ಭೂ ಕಂದಾಯವನ್ನು ಸಂಗ್ರಹಿಸುವುದು ಅವರ ಮುಖ್ಯ ಕರ್ತವ್ಯವಾಗಿತ್ತು. ಆದಾಯ ಸಂಗ್ರಹ ಕರ್ತವ್ಯದ ಹೊರತಾಗಿ ಅವರು ಪೊಲೀಸ್ ಮತ್ತು ಮಿಲಿಟರಿ ಸೇವೆಯನ್ನು ನಿರ್ವಹಿಸಬೇಕಾಗಿತ್ತು. ದೇಶಮುಖ ಮತ್ತು ದೇಶಪಾಂಡೆಯವರು ಸ್ವಂತ ಪಡೆಗಳನ್ನು ನಿರ್ವಹಿಸುತ್ತಿದ್ದರು.

ಭೂಕಂದಾಯ ಆಡಳಿತದ ಸ್ಥಿರತೆಗಾಗಿ ಮತ್ತು ಸ್ಥಳೀಯ ದಾಖಲೆಗಳ ನಿರ್ವಹಣೆಯಲ್ಲಿ ನಿರಂತರತೆಯನ್ನು ಸಾಧಿಸಿಕೊಳ್ಳುವ ಸಲುವಾಗಿ ದಖ್ಖನಿನಲ್ಲಿ ಕೆಳಗಿನ ಕಂದಾಯ ಆಡಳಿತದ ಕಚೇರಿಗಳನ್ನು ಅನುವಂಶಿಕ ಆಧಾರದ ಮೇಲೆ ನಡೆಸಲು ಅನುಮತಿಸಲಾಯಿತು: ಸರ್‌ದೇಶಮುಖ, ಸರ್‌ದೇಶಪಾಂಡೆ, ದೇಶಮುಖ್, ಪಟವಾರಿ, ಕಾನೂಂಗೋ ಇತ್ಯಾದಿ. ಕಾನೂಂಗೋ ಅವರು ಆದಾಯ ದಾಖಲೆಗಳನ್ನು ನೋಡಿಕೊಳ್ಳುವವರು ಮತ್ತು ಅಸಫ್ ಜಾಹಿ ಆಡಳಿತಕ್ಕೆ ಪ್ರಮುಖವಾದ ಆದಾಯ ರಸೀದಿಗಳ ಎಲ್ಲಾ ಅಂಕಿ ಅಂಶಗಳ ಮಾಹಿತಿಗಳನ್ನು ನಿರ್ವಹಿಸುತ್ತಿದ್ದರು. ಅವರು ಜಮಾ-ಕಮಿಲ್ ಮತ್ತು ಜಮಾಬಂದಿಯ ಗ್ರಾಮವಾರು ವಿವರವಾದ ಖಾತೆಯನ್ನು ಸಹ ನಿರ್ವಹಿಸುತ್ತಿದ್ದರು.

**ಜಾಗೀರ್‌ದಾರರು:**

ಪ್ರಾಚೀನ ಇನಾಮ್ ಪದ್ಧತಿಯಂತೆ ಈ ವ್ಯವಸ್ಥೆ ಅಸಫ್ ಜಾಹಿ ಆಡಳಿತಗಾರರ ರಚನೆಯಾಗಿದೆ. ಗ್ರಿಬಲ್ ಪ್ರಕಾರ ನಿಜಾಮ್-ಉಲ್-ಮುಲ್ಕ್ ತನ್ನೊಂದಿಗೆ ಮಾಳ್ವದಿಂದ ಹಲವಾರು ಅನುಯಾಯಿಗಳು, ಮುಸ್ಲಿಮರು ಮತ್ತು ಹಿಂದೂಗಳನ್ನು ಕರೆತಂದಿದ್ದರು. ಮಾಜಿ ಕುಲೀನರಿಗೆ ಅವರು ಮಿಲಿಟರಿ ಅಧಿಕಾರದ ಮೇಲೆ ಜಾಗೀರುಗಳನ್ನು ನೀಡಿದರು ಮತ್ತು ಅವರನ್ನು ತಮ್ಮ ಜನರಲ್‌ಗಳಾಗಿ ನೇಮಿಸಿಕೊಂಡರು. ಅವರು ತಮ್ಮ ಜಾಗೀರಿನಿಂದ ಯಾವುದೇ ಬಾಡಿಗೆಯನ್ನು ಪಾವತಿಸಬೇಕಾಗಿರಲಿಲ್ಲ ಮತ್ತು ಜಾಗೀರುಗಳಿಂದ ಬರುವ ಸಂಪೂರ್ಣ ಆದಾಯವನ್ನು ಹೊಂದಿದ್ದರು.

ಜಾಗೀರದಾರರ ಅಧೀನದಲ್ಲಿ ಪರಗಣಗಳಲ್ಲಿ ಕಂದಾಯ ವಸೂಲಿ ಮತ್ತು ನಿರ್ಧಾರ ಸಂಪೂರ್ಣವಾಗಿ ದೇಸಾಯಿಗಳ ಅಧೀನದಲ್ಲಿದ್ದು, ವಸೂಲಿಯಾದ ಕಂದಾಯವನ್ನು ನೇರವಾಗಿ ಕೇಂದ್ರ ಖಜಾನೆಗೆ ಕಳುಹಿಸುವ ಜವಾಬ್ದಾರಿ ಇವರದಾಗಿತ್ತು. ದೇಸಾಯಿಯು ದೇಶಪಾಂಡೆ ಮತ್ತು ಆಯಾ ಗ್ರಾಮದ ಮುಖ್ಯಸ್ಥನಾದ ಪಾಟೀಲ ಮತ್ತು ಕುಲಕರ್ಣಿಯರ ಸಹಾಯದಿಂದ ಪ್ರತಿ ಗ್ರಾಮದಿಂದ ಬರುವ ಕಂದಾಯವನ್ನು ನಿರ್ಣಯಿಸುತ್ತಿದ್ದು, ಅದನ್ನು ಮೊದಲು ಕೇಂದ್ರಕ್ಕೆ ತಿಳಿಸಿ ಕೇಂದ್ರದ ಒಪ್ಪಿಗೆ ಪಡೆದು ಕಂದಾಯ ವಸೂಲಿಯನ್ನು ಮಾಡುತ್ತಿದ್ದರು. ಈ ರೀತಿ ತನ್ನ ಪರಗಣದ ಅಧೀನ ಬರುವ ಪ್ರತಿ ಗ್ರಾಮದಿಂದ ನಿರ್ದಿಷ್ಟ ಪ್ರಮಾಣದಲ್ಲಿ ಪಾಟೀಲನ ಸಹಾಯದಿಂದ ಕಂದಾಯ ವಸೂಲಿ ಮಾಡಿ ನಿಗದಿತ

ಸಮಯದಲ್ಲಿ ಕೇಂದ್ರಕ್ಕೆ ಮುಟ್ಟಿಸುವ ಮಹತ್ವದ ಕರ್ತವ್ಯವನ್ನು ನಿರ್ವಹಿಸುತ್ತಿದ್ದರು. ರಾಜ್ಯದ ನೇರ ಆಡಳಿತಕ್ಕೊಳಪಟ್ಟ ಪರಗಣಗಳಲ್ಲಿನ ಕಂದಾಯ ವಸೂಲಿಯ ಜವಾಬ್ದಾರಿಗಳನ್ನು ಸಾಮಾನ್ಯವಾಗಿ ಹವಾಲ್ದಾರನು ನಿರ್ವಹಿಸುತ್ತಿದ್ದನು. ಇದಕ್ಕೆ ಪೂರಕವಾಗಿ ಆದಿಲ್ ಶಾಹಿ ಕಾಲದ ಒಂದು ಫರ್ಮಾನ್ ವಿವರಿಸುವುದೇನೆಂದರೆ ಮಾಮಲಾದ ಹವಾಲ್ದಾರನು ಕಂದಾಯ ವಸೂಲಿಗಾಗಿ ತನ್ನ ಅಧಿಕಾರಿಗಳನ್ನು ಪ್ರತಿ ಗ್ರಾಮಕ್ಕೂ ಕಳಿಸಿದನೆಂದು ತಿಳಿಸುತ್ತದೆ.

ಸಾಮಾನ್ಯವಾಗಿ ದೇಶಮುಖರಿಗೆ ಅಥವಾ ಗುತ್ತಿಗೆದಾರರಿಗೆ ಅಥವಾ ಸ್ಥಳೀಯ ಜಮೀನ್ದಾರರಿಗೆ ನಿರ್ದಿಷ್ಟ ಅವಧಿಗೆ ಭೂಮಿಯನ್ನು ಬಾಡಿಗೆಗೆ ನೀಡಲಾಗುತ್ತಿತ್ತು. ಗುತ್ತಿಗೆ ಪಡೆದ ಪ್ರದೇಶದ ಆದಾಯದ ಪಾವತಿಗೆ ಈ ಗುತ್ತಿಗೆದಾರರು ರಾಜ್ಯಕ್ಕೆ ಜವಾಬ್ದಾರರಾಗಿದ್ದರು. ಅವರು ನಿರ್ದಿಷ್ಟ ಅವಧಿಗೆ ಗುತ್ತಿಗೆ ಪಡೆದ ಪ್ರದೇಶದ ಗುತ್ತಿಗೆದಾರರಾಗಿದ್ದರು, ಆದರೆ ಅವರು ಮಾಲೀಕರಂತೆ ಕಾರ್ಯನಿರ್ವಹಿಸಿದರು. ಸಾಮಾನ್ಯವಾಗಿ ತಾಲೂಕುದಾರರಿಂದ ರಾಜ್ಯದ ಖಜಾನೆಗೆ, ದೇಶಮುಖ-ದೇಶಪಾಂಡೆಯವರಿಂದ ತಾಲೂಕುಗಳಿಗೆ ಅಥವಾ ಗ್ರಾಮ ಮುಖ್ಯಸ್ಥರು, ಪರಗಣ ಅಧಿಕಾರಿಗಳು ಅಥವಾ ತಾಲೂಕುದಾರರಿಗೆ ನಿಯಮಿತವಾಗಿ ಆದಾಯವನ್ನು ಪಾವತಿಸುತ್ತಿರಲಿಲ್ಲ. ಆದ್ದರಿಂದ ವಾರ್ಷಿಕ ಆದಾಯವನ್ನು ಪಡೆಯಲು ರಾಜ್ಯ ಅಧಿಕಾರಿಗಳು ಪರಗಣ ಮತ್ತು ಹಳ್ಳಿಗಳಿಗೆ ಭೇಟಿ ನೀಡಿದರು. ಕಂದಾಯ ವಸೂಲಿ ಮಾಡಿ ಸುಸ್ತಿದಾರರನ್ನು ಬಂಧಿಸಿ ಕೇಂದ್ರ ಸರಕಾರಕ್ಕೆ ವರದಿ ಸಲ್ಲಿಸಿದರು. ಒಟ್ಟು ಗ್ರಾಮ ಮತ್ತು ಪರಗಣದ ಮೇಲೆ ಒಟ್ಟಾರೆಯಾಗಿ ಆದಾಯವನ್ನು ನಿಗದಿಪಡಿಸಲಾಗಿದೆ. ಇದರಿಂದ ಇಂತಹ ಪರಗಣಗಳಲ್ಲಿ ದೇಸಾಯಿಯವರ ಪ್ರಮುಖ ಕಾರ್ಯವಾದ ಕಂದಾಯ ವಸೂಲಿ ಕೆಲಸವನ್ನು ಕಸಿದುಕೊಳ್ಳಲಾಯಿತು ಎಂದು ತಿಳಿದು ಬರುತ್ತದೆ.

**ಪರಗಣಗಳು:**

ಪರಗಣಗಳ ಆಡಳಿತದಲ್ಲಿ ದೇಸಾಯಿಗೆ ಸಲಹೆ ಸಹಕಾರ ನೀಡುತ್ತಿದ್ದರಲ್ಲದೆ ಪರಗಣದ ಆದಾಯ ವೆಚ್ಚದ ದಾಖಲೆಗಳನ್ನು ಇಡುವುದು ಇವನ ಪ್ರಮುಖ ಕರ್ತವ್ಯವಾಗಿತ್ತು. ಪರಗಣದ ವ್ಯಾಪ್ತಿಯಲ್ಲಿ ಬರುವ ಗ್ರಾಮದ ಕಂದಾಯವನ್ನು ನಿರ್ದಿಷ್ಟಪಡಿಸುವಲ್ಲಿ ದೇಶಪಾಂಡೆ ಪ್ರಮುಖ ಪಾತ್ರ ವಹಿಸುತ್ತಿದ್ದು ಅದನ್ನು ದಾಖಲುಪಡಿಸಿ ದೇಸಾಯಿ ಮುಖಾಂತರ ಕೇಂದ್ರಕ್ಕೆ ಕಳುಹಿಸಲಾಗುತ್ತಿತ್ತು. ದೇಶಪಾಂಡೆಯವರ ಅಧಿಕಾರದ ಇನ್ನೊಂದು ವಿಶೇಷತೆ ಏನೆಂದರೆ ದೇಸಾಯಿ ಕೇಂದ್ರದ ಅಧೀನ ಪರಗಣಗಳಲ್ಲಿನ ಕಂದಾಯ ವಸೂಲಿ ಅಧಿಕಾರ ಜಹಗೀರದಾರರ ಅಧೀನದಲ್ಲಿನ ಪರಗಣಗಳ ಕಂದಾಯ ವಸೂಲಿ ಅಧಿಕಾರಕ್ಕಿಂತ ಭಿನ್ನವಾಗಿತ್ತು.

ದೇಶಪಾಂಡೆಯವರ ಪಾತ್ರ ಈ ಎರಡು ರೀತಿಯ ಪರಗಣಗಳಲ್ಲಿ ಒಂದೇ ರೀತಿಯಾಗಿರುವುದನ್ನು ನೋಡಬಹುದು. ಉದಾಹರಣೆಗೆ ನಿಜಾಮನ ಆದೇಶದ ಮೇರೆಗೆ ಹವಾಲ್ದಾರನು ಪರಗಣದ ಕಂದಾಯವನ್ನು ನಿರ್ಧರಿಸುವಲ್ಲಿ, ವಸೂಲಿ ಮಾಡುವಲ್ಲಿ, ದಾಖಲಿಸುವಲ್ಲಿ ಮತ್ತು ಕಡಿತಗೊಳಿಸುವಂತಹ ಸಂದರ್ಭದಲ್ಲಿ ಅಲ್ಲಿಯ ದೇಶಪಾಂಡೆಗಳೊಂದಿಗೆ ಚರ್ಚಿಸಿ ನಿರ್ಧಾರ ತೆಗೆದುಕೊಳ್ಳುತ್ತಿದ್ದನು. ಹೀಗಾಗಿ ಈ ಎರಡು ಪ್ರದೇಶದ ಕಂದಾಯ ಆಡಳಿತದಲ್ಲಿ ದೇಶಪಾಂಡೆಯು ಪ್ರಮುಖ ಪಾತ್ರ ವಹಿಸುತ್ತಿದ್ದನು. ಈ ರೀತಿ ಇನಾಮ್‌ಗಳನ್ನು ಪಡೆದ ದೇಸಾಯಿಯವರಿಗೆ ಮುಂದೆ ತೊಂದರೆಯಾಗದ ರೀತಿಯಲ್ಲಿ ಫರ್ಮಾನ್‌ಗಳನ್ನು ಹೊರಡಿಸಿ, ಆಯಾ ಪ್ರದೇಶದ ಸುಭೇದಾರ್ ಹಾಗೂ ಇಂತಹ ಇನಾಮ್‌ಗಳನ್ನು ಪಡೆದ ದೇಸಾಯಿಯವರು ಅರಸರಿಗೆ ವಿಧೇಯರಾಗಿ ಪ್ರಾಮಾಣಿಕವಾಗಿರಲು ಸಾಧ್ಯವಾಯಿತು.

ಪರಗಣಗಳ ಸುವ್ಯವಸ್ಥಿತ ಆಡಳಿತ ನಿರ್ವಹಣೆಗಾಗಿ ದೇಸಾಯಿಗೆ ಸಹಾಯಕರಾಗಿ

ಹಲವು ಅಧಿಕಾರಿಗಳನ್ನು ನೇಮಕ ಮಾಡಲಾಗಿತ್ತು. ಅವರಲ್ಲಿ ಕುಲಕರ್ಣಿ, ಪಾಟೀಲ್, ದೇಶಪಾಂಡೆ ಪ್ರಮುಖರಾಗಿದ್ದರು. ಈ ಸೇವೆಯ ಪ್ರತಿಫಲವಾಗಿ ಅರಸರಿಂದ ದೇಶಪಾಂಡೆಯವರು ಕೂಡ ಇನಾಮ್‌ಗಳನ್ನು ಪಡೆಯುತ್ತಿದ್ದರು. ಸಾಮಾನ್ಯವಾಗಿ ಇದು ದೇಸಾಯಿಯ ಅರ್ಧದಷ್ಟು ಇರುತ್ತಿತ್ತು. ಅಲ್ಲದೆ ಇದು ದೇಸಾಯಿಯಿಂದ ಸ್ವತಂತ್ರವಾಗಿರುತ್ತಿತ್ತು. ಇನಾಮ್ ಹಳ್ಳಿ ಮತ್ತು ಇನಾಮ್ ಭೂಮಿಯ ಮೇಲೆ ದೇಶಪಾಂಡೆಗೆ ಸ್ವತಂತ್ರ ಅಧಿಕಾರಗಳಿದ್ದು ಇದರಲ್ಲಿ ಯಾರೂ ಭಾಗವಹಿಸುವ ಅಧಿಕಾರವಿರಲಿಲ್ಲ. ಒಟ್ಟಿನಲ್ಲಿ ಪರಗಣದ ಕಂದಾಯ ವಸೂಲಿಯ ಮಹತ್ವದ ಕರ್ತವ್ಯ ನಿರ್ವಹಿಸುವ ಜವಾಬ್ದಾರಿ ದೇಸಾಯಿಯದಾಗಿತ್ತು. ಪ್ರತಿ ಗ್ರಾಮದಿಂದ ನೀರಾವರಿ ತೆರಿಗೆ, ಬಂಜರು ಭೂಮಿ ತೆರಿಗೆ, ಯುದ್ಧ ತೆರಿಗೆ, ಪೇಶಕಾಶ್, ವಾಣಿಜ್ಯ ತೆರಿಗೆ ಮೊದಲಾದ ತೆರಿಗೆಗಳನ್ನು ಪರಗಣದ ದೇಸಾಯಿಗಳು ಪಡೆಯುತ್ತಿದ್ದರು. ಇದರಿಂದ ಇಂತಹ ಪರಗಣಗಳಲ್ಲಿ ದೇಸಾಯಿಯವರ ಪ್ರಮುಖ ಕಾರ್ಯವಾದ ಕಂದಾಯ ವಸೂಲಿ ಕೆಲಸವನ್ನು ಕಸಿದುಕೊಳ್ಳಲಾಯಿತು ಎಂದು ತಿಳಿದು ಬರುತ್ತದೆ.

**ಗ್ರಾಮಗಳು:**

ಪ್ರತಿ ಪರಗಣವು ಹಲವಾರು ಗ್ರಾಮಗಳನ್ನು ಒಳಗೊಂಡಿದ್ದು ಅವುಗಳ ಆಡಳಿತ ನಿರ್ವಹಣೆಗೆ ಪ್ರತಿಯೊಂದು ಗ್ರಾಮಕ್ಕೆ ಸ್ಥಳೀಯ ಪಾಟೀಲ ಮತ್ತು ಕುಲಕರ್ಣಿಯವರನ್ನು ನೇಮಿಸಲಾಗುತ್ತಿತ್ತು. ಇವರು ಕೂಡ ವಂಶಪಾರಂಪರಿಕ ಅಧಿಕಾರ ಹೊಂದಿದ್ದರು. ಪಾಟೀಲನು ಗ್ರಾಮದ ಮುಖ್ಯಸ್ಥನಾಗಿದ್ದು ಗ್ರಾಮದ ಕಂದಾಯ ವಸೂಲಿ, ವ್ಯಾಜ್ಯಗಳನ್ನು ಬಗೆಹರಿಸುವುದು ಹಾಗೂ ಗ್ರಾಮದ ಆಚಾರ-ವಿಚಾರಗಳನ್ನು ಮುಂದುವರಿಸಿಕೊಂಡು ಹೋಗುವ ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದನು. ಕುಲಕರ್ಣಿಯು ಗ್ರಾಮದ ಕಂದಾಯ ದಾಖಲೆಗಳನ್ನು ಇಡುತ್ತಿದ್ದು, ಪಾಟೀಲನಿಗೆ ಸಹಾಯಕನಾಗಿರುತ್ತಿದ್ದನು. ಪ್ರಮುಖವಾಗಿ ಕಂದಾಯ ವಸೂಲಿ ಸಂದರ್ಭದಲ್ಲಿ ಪಾಟೀಲ, ಕುಲಕರ್ಣಿಯರು ಪರಗಣದ ದೇಸಾಯಿ ಹಾಗೂ ದೇಶಪಾಂಡೆಯವರ ಸಹಾಯಕರಾಗಿರುತ್ತಿದ್ದರು. ಇವರುಗಳ ಸಹಾಯದಿಂದ ಆ ಗ್ರಾಮದ ಕಂದಾಯವನ್ನು ನಿರ್ಧರಿಸಿ ಇವರ ಮುಖಾಂತರವೇ ವಸೂಲಿ ಮಾಡುತ್ತಿದ್ದರು. ಅಲ್ಲದೆ ನೈಸರ್ಗಿಕ ವಿಕೋಪ ತಲೆದೋರಿದ ಪರಿಸ್ಥಿತಿಯಲ್ಲಿ ಪಾಟೀಲನ ಮನವಿಯ ಮೇರೆಗೆ ದೇಸಾಯಿ ಕೇಂದ್ರಕ್ಕೆ ಮನವಿ ಸಲ್ಲಿಸಿ ಆ ವರ್ಷ ಗ್ರಾಮದ ಕಂದಾಯ ವಸೂಲಿಯಲ್ಲಿ ವಿನಾಯಿತಿ ಮಾಡಲಾಗುತ್ತಿತ್ತು. ಕುಲಕರ್ಣಿ ಗ್ರಾಮಗಳಲ್ಲಿ ಭೂ ಕಂದಾಯವನ್ನು ಸಂಗ್ರಹಿಸುವ ಕರ್ತವ್ಯ ನಿರ್ವಹಿಸುತ್ತಿದ್ದನು.

ಈತನು ಪಟೇಲನಿಗೆ ಸಹಾಯಕನಾಗಿ ಕರ್ತವ್ಯ ನಿಭಾಯಿಸುತ್ತಿದ್ದನು. ಗ್ರಾಮಗಳ ಭೂ ಕಂದಾಯಕ್ಕೆ ಸಂಬಂಧಿಸಿದ ಮಾಹಿತಿಯನ್ನು ದಾಖಲೆ ಇಡುವುದು ಇತನ ಕರ್ತವ್ಯವಾಗಿತ್ತು. ಈ ಹುದ್ದೆಗೆ ಹೆಚ್ಚಾಗಿ ಬ್ರಾಹ್ಮಣ ಸಮುದಾಯಕ್ಕೆ ಸೇರಿದವರೇ ಆಯ್ಕೆಯಾಗುತ್ತಿದ್ದರು. ಮಾಲಿ ಪಾಟೀಲ್ ಇವರು ಗ್ರಾಮ ಆಡಳಿತದಲ್ಲಿ ತೆರಿಗೆಯನ್ನು ಸಂಗ್ರಹಿಸುವ ಪ್ರಮುಖ ಅಧಿಕಾರಿಯಾಗಿದ್ದನು. ಕುಲಕರ್ಣಿಯ ಜೊತೆಗೂಡಿ ಕಂದಾಯ ಸಂಗ್ರಹಿಸುತ್ತಿದ್ದನು. ಭೂಕಂದಾಯ ತೆರಿಗೆಯ ಹೊರತಾಗಿಯೂ ದಂಗೀರ ಪಟ್ಟಿ, ಶಾದಿ ಪಟ್ಟಿ, ದೇರಪಟ್ಟಿ, ಕಟಾಲ ಪಟ್ಟಿ, ಜೋಲಾಪಟ್ಟಿ, ದಫೂನ್, ಮಾಚಿಗುತ್ತಿ, ಕುಂಬಾರ ಪಟ್ಟಿ, ಆದಂಪಟ್ಟಿ ಮತ್ತು ಮೋಹತರ್ಫಾ ಮುಂತಾದ ಹಲವಾರು ತೆರಿಗೆಗಳು ಅಸ್ತಿತ್ವದಲ್ಲಿದ್ದವು.

## ಪರಾಮರ್ಶನ ಗ್ರಂಥಗಳು:


1. ಅಮರೇಶ ನುಗಡೋಣಿ, ಹೈದರಾಬಾದ್ ಕರ್ನಾಟಕದ ಹಾಡು ಪಾಡು, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2017.
2. ಅಮರೇಶ್ ಯತಗಲ್, ಕರ್ನಾಟಕದ ಜೀವಂತ ನಾಯಕ ಅರಸು ಮನೆತನಗಳು, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2020.
3. ಅರುಣ್ ಜೋಳದಕೂಡ್ಲಿಗಿ, ಸಂಡೂರು ಭೂ ಹೋರಾಟ, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2008.
4. ಅರುಣಿ ಎಸ್.ಕೆ., ಮಧ್ಯಕಾಲೀನ ಕಲಬುರ್ಗಿ, ಇತಿಹಾಸ ದರ್ಪಣ ಪ್ರಕಾಶನ, ಬೆಂಗಳೂರು, 2020.
5. ಗೋಪಾಲ್ ಆರ್, ಕೊಪ್ಪಳ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು, 2017.
6. ಚಿರಾಗ್ ಅಲೀ, ಹೈದರಾಬಾದ್ ಅಂಡರ್ ಸಾಲಾರ್ ಜಂಗ್ ವ್ಯಾಲ್ಯೂಮ್-3, ಭಾರತಿ ಎಜುಕೇಶನ್ ಸೊಸೈಟಿ.
7. Jayaram R, Administrative system under the Nizam, Ultra Publication Bengaluru, 1995.
8. Provincial series Hyderabad state Raichur, Karnataka gazetteer department Bangalore, government of Karnataka, 1909.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.